III ಶ್ರೀ ರಮಾನಾಥ ರೈ (ಮೀನುಗಾರಿಕೆ ಹಾಗೂ ಬಂದರು ಮಂತ್ರಿ) : ಮಾನ್ಯ ಅಧ್ಯಕ್ಷರೇ, 1956ರ ಕಂಪನಿಗಳ ಕಾಯ್ದೆಯ 619(ಎ) ಕಲಂ ಮೇರೆಗೆ;

1997-98ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ 13ನೇ ವಾರ್ಷಿಕ ಮತ್ತು ಲೆಕ್ಕಪತ್ರಗಳ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು: ಈಗ ಉಪಾಧ್ಯಕ್ಷರ ಚುನಾವಣೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷದವರಿಗೆ ನೀಡುವುದರ ಬಗ್ಗೆ ಒತ್ತಾಯ

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ಇವತ್ತು ಉಪ ಸಭಾಧ್ಯಕ್ಷರನ್ನು ಆಯ್ಕೆ ಮಾಡುವ ಕಾರ್ಯಕ್ರಮ ಇದೆ ಲೋಕಸಭೆಯಲ್ಲಿ ಯಾವ ರೀತಿಯಲ್ಲಿ ಎನ್.ಡಿ.ಎ. ಸರ್ಕಾರ ಸತ್ಸಂಪ್ರದಾಯದ ಪ್ರಕಾರ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಒಂದು ಸೌಹಾರ್ದಯುತ ವಾತಾವರಣ ನಿರ್ಮಿಸಬೇಕು, ವಿರೋಧ ಪಕ್ಷಗಳಿಗೂ ಒಂದು ಗೌರವ ನೀಡಬೇಕೆಂಬ ಸದುದ್ದೇಶದಿಂದ ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷಕ್ಕೆ ಬಿಟ್ಟು ಕೊಟ್ಟಿದೆಯೋ ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ಅದೇ ಸಂಪ್ರದಾಯವನ್ನು ನಮ್ಮ ಆಡಳಿತರೂಢ ಪಕ್ಷದವರು ಪಾಲಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಇವತ್ತಿನವರೆಗೂ, ಈ ಕ್ಷಣದವರೆಗೂ ಈ ವಿಷಯವಾಗಿ ಅಲ್ಲದೇ ಅಧ್ಯಕ್ಷರ ಚುನಾವಣೆ ನಡೆದಂತಹ ಸಂದರ್ಭದಲ್ಲೂ ಸಹಿತ, ವಿರೋಧ ಪಕ್ಷದ ಧುರೀಣರನ್ನು, ಶಾಸಕರುಗಳನ್ನು ಆಡಳಿತ ಪಕ್ಷ ಕನ್‌ಸಲ್ಟ್ ಮಾಡಲಿಲ್ಲ. ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲೇ ವಿಷಾದವನ್ನೂ ಕೂಡ ವ್ಯಕ್ತಪಡಿಸಿದರು. ಉಪಾಧ್ಯಕ್ಷರ ಚುನಾವಣೆಗೆ ನಿನ್ನೆ ನಾಮಿನೇಷನ್ ಸಲ್ಲಿಸಲಾಗಿದೆ. ಈ ಕ್ಷಣದವರೆಗೂ ಉಪಾಧ್ಯಕ್ಷರ ಚುನಾವಣೆ ಸರ್ವಾನುಮತದಿಂದ ನಡೆಯುವಂತೆ ಮಾಡುವುದಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ. ಅಂತಹ ಸೌಹಾರ್ದಯುತವಾದ ವಾತಾವರಣ ನಿರ್ಮಾಣವಾಗಿಲ್ಲ. ಆ ರೀತಿಯ ಸೌಹಾರ್ದಯುತ ವಾತಾವರಣವನ್ನು ನಿರ್ಮಿಸಲಿಕ್ಕೆ ಪ್ರಯತ್ನವನ್ನೂ ಕೂಡ ಆಡಳಿತ ಪಕ್ಷ ಮಾಡಿಲ್ಲ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಒಂದು ಸೌಹಾರ್ದಯುತ ವಾತಾವರಣ ಮೂಡಿಸುವ ಸಲುವಾಗಿ ಮತ್ತು ಸತ್ಸಂಪ್ರದಾಯವನ್ನು ಕಾಯ್ದುಕೊಳ್ಳುವ ಸಲುವಾಗಿ, ಇಡೀ ಕರ್ನಾಟಕವೇ ಇತರ ರಾಜ್ಯಗಳಿಗೆ ಮಾದರಿಯಾಗುವ ರೀತಿಯಲ್ಲಿ, ಸದನದ ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷದವರಿಗೆ ದಯವಿಟ್ಟು ಬಿಟ್ಟು ಕೊಟ್ಟು ವಿರೋಧ ಪಕ್ಷಗಳ ಅಭ್ಯರ್ಥಿಯನ್ನು ಸರ್ವಾನುಮತದಿಂದ ಚುನಾಯಿಸಬೇಕೆಂದು ನಾನು ಆಡಳಿತ ಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ವಿಚಾರಗಳನ್ನು ಸದನಕ್ಕೆ ತಿಳಿಸಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೇ, ಸತ್ ಸಂಪ್ರದಾಯಗಳ ಬಗ್ಗೆ ಮಾತನಾಡುವುದು ಸುಲಭ, ಆದರೆ ಅವುಗಳನ್ನು

ಆಚರಣೆಗೆ ತರುವುದು ಕಷ್ಟ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನನ್ನ ಅನುಭವದ ಆಧಾರದ ಮೇಲೆ ಹೇಳುವುದಾದರೆ, ಹೇಳುವುದು ಕೇಳುವುದು ಇಂತಹವೆಲ್ಲಾ ಸದನದ ಚರ್ಚೆಯ ಒಂದು ಭಾಗವಾಗಬಾರದು. ಶ್ರೀಮಾನ್ ವಿರೋಧ ಪಕ್ಷದ ನಾಯಕರು 'ಕನ್‌ಸಲ್ಟ್ ಮಾಡಲಿಲ್ಲ' 'ಕನ್‌ಸಲ್ಟ್ ಮಾಡಲಿಲ್ಲ' ಎಂಬ ಮಾತನ್ನು ಪದೇ ಪದೇ ಹೇಳುತ್ತಿದ್ದಾರೆ. 'ಕನ್‌ಸಲ್ಟೇಷನ್' ಎಂಬ ಪದದ ಅರ್ಥ ಏನೆಂಬುದೇ ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸೌಜನ್ಯಕ್ಕಾಗಿ ವಿಷಾದ ವ್ಯಕ್ತಪಡಿಸಿದರು. ಅದನ್ನು ಸದನದಲ್ಲಿ ಪದೇ ಪದೇ ಜ್ಞಾಪಿಸಬೇಕಾದಂತಹ ಅವಶ್ಯಕತೆ ಇಲ್ಲ. ಕನ್‌ಸಲ್ಟೇಷನ್ ಎಂದರೆ ಏನು? ನಾನು ವಿರೋಧ ಪಕ್ಷದ ನಾಯಕರ ಜೊತೆಗೆ ಕುರಿತು ಮಾತನಾಡಿದ್ದೇನೆ. ಸದನದಲ್ಲೇ ಕುಳಿತು ಮಾತನಾಡಿದ್ದೇನೆ, ಖಾಸಗಿಯಾಗಿ ಅಲ್ಲ. ಅಧ್ಯಕ್ಷರ ಚುನಾವಣೆ ಸಂದರ್ಭದಲ್ಲೂ ಕೂಡ ನಾನು ಮಾತನಾಡಿದ್ದೇನೆ ಹಾಗೆಯೇ ಅನೇಕ ಜನ ಮುಖಂಡರುಗಳನ್ನೂ ಕೂಡ ನಾನು ಅವರವರ ಆಸನದ ಪಕ್ಕದಲ್ಲಿ ಕುಳಿತು ಚರ್ಚೆ ಮಾಡಿದ್ದೇನೆ. ಅದಕ್ಕಿಂತ ವಿಸ್ತಾರವಾದ ಚರ್ಚೆಯ ಹೇಗೆ ಎಂಬುದು ನನಗೆ ಗೊತ್ತಿಲ್ಲ. ಮಾನ್ಯ ಸಭಾನಾಯಕರು ಉಪಾಧ್ಯಕ್ಷರ ಸ್ಥಾನಕ್ಕೆ ನೀಡಿರುವ ಸೂಚನೆ ಏನಿದೆಯೋ ಅದನ್ನು ಮಾನ್ಯ ಅಧ್ಯಕ್ಷರು ಈಗ ಕೈಗೆತ್ತಿಕೊಂಡರೆ ಒಳ್ಳೆಯದು ಎಂದು ಕಾಣುತ್ತದೆ. ನಾವು ಎಷ್ಟು ಸಾರಿ ಚರ್ಚಿಸಿದರೂ ಚರ್ಚೆ ಮಾಡಲಿಲ್ಲ ಎಂದರೆ ಹೇಗೆ? ಚರ್ಚೆ ಮಾಡಿರುವುದಕ್ಕೆ ಏನಾದರೂ ಸಾಕ್ಷ್ಯಾಧಾರಗಳನ್ನು ಇಟ್ಟುಕೊಳ್ಳಬೇಕಾದ ಪ್ರಸಂಗ ಬಂದರೆ ತುಂಬಾ ಕಷ್ಟವಾಗುತ್ತದೆ. ಸತ್ ಸಂಪ್ರದಾಯ ಪಾಲನೆ ಮಾಡಬೇಕೆಂಬ ತಮ್ಮ ಇಚ್ಛೆ ಏನಿದೆಯೋ ಅದಕ್ಕೆ ನಾವು ವಿರೋಧ ಏನಿಲ್ಲ. ಆದರೆ ನಮ್ಮ ಪರಿಸ್ಥಿತಿಯನ್ನು ನಿಮಗೆ ಹೇಳಿದ್ದೇನೆ. ಅದು ಕನ್‌ಸಲ್ಟೇಷನ್ ಎಂದು ನೀವು ಒಪ್ಪಿಕೊಳ್ಳುವುದಾದರೆ ಸದನ ಚೆನ್ನಾಗಿ ನಡೆಯಬೇಕು ಎಂಬ ನಿಮ್ಮ ಅಭಿಲಾಷೆಯನ್ನು ಏನು ವ್ಯಕ್ತ ಮಾಡಿದ್ದೀರಿ, ಅದು ಆಧಾರ ಆಗುವುದಾದರೆ, ಈ ವಿಚಾರದಲ್ಲಿ ನಾವು ಹೆಚ್ಚು ಗೊಂದಲವನ್ನು ಮಾಡುವುದು ಬೇಡ ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸದನದ ಹಿತದೃಷ್ಟಿಯಿಂದ ನೀವು ಸಹಕರಿಸಬೇಕೆಂದು ನಾನು ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ಉಪಾಧ್ಯಕ್ಷರ ಚುನಾವಣೆ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಔಪಚಾರಿಕವಾಗಿ ಕೇವಲ ಶಾಸ್ತ್ರಕ್ಕೋಸ್ಕರ ಸಮಾಲೋಚನೆ ಮಾಡತಕ್ಕದ್ದು ಒಂದು ಭಾಗ. ತಾವು ಹೇಳಿದ ಹಾಗೆ ಕರ್ನಾಟಕ ವಿಧಾನ ಸಭೆಯ ಚರಿತ್ರೆಯಲ್ಲಿ ಯಾವತ್ತಿಗೂ ಕೂಡ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಉಪಾಧ್ಯಕ್ಷರ ಸ್ಥಾನವನ್ನು ಆಡಳಿತ ಪಕ್ಷದ ಸಂಖ್ಯೆಗನುಗುಣವಾಗಿಯೇ ನಾವು ಆಯ್ಕೆ ಮಾಡಿಕೊಂಡು ಬಂದಿದ್ದೇವೆಯೇ ವಿನಃ ಸತ್ ಸಂಪ್ರದಾಯವನ್ನು ತಾವು ಹೇಳಿದ ಹಾಗೆ ನಾವು ಪ್ರಾರಂಭ ಮಾಡಿಲ್ಲ ಎನ್ನತಕ್ಕದ್ದು ಒಂದು ಭಾಗ. ಆದರೆ ಮಾನ್ಯ ಎಸ್. ಎಂ. ಕೃಷ್ಣರವರಂತಹ ಸಂಸದೀಯ ಪಟುಗಳು, ಅಪಾರವಾದ ಅನುಭವ ಇರತಕ್ಕ ಜನರು, ಮುಖಂಡರುಗಳು ಮತ್ತು ನಿಮ್ಮಂತಹ ದಿಗ್ಗಜರು ಕುಳಿತಿರತಕ್ಕಂತಹ ಸಂದರ್ಭದಲ್ಲಿ, ಈ ವಿಧಾನ ಸಭೆಯಲ್ಲಿ ಒಂದು ಸತ್ ಸಂಪ್ರದಾಯವನ್ನು ತಾವು ಪ್ರಾರಂಭ ಮಾಡಿದರೆ ತಪ್ಪೇನು ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಯಾರನ್ನು ತಾವು ಉಪಾಧ್ಯಕ್ಷರನ್ನಾಗಿ ಮಾಡಬೇಕೆಂದು ಹೊರಟಿದ್ದೀರಿ, ಅವರ ಬಗ್ಗೆ ನಮಗೆ ಬಹಳ ಸಂತೋಷ

ಇದೆ. ಅದು ಬೇರೆ ವಿಚಾರ. ಆದರೆ ಇವತ್ತು ತಾವು ದಯವಿಟ್ಟು ಉಪಾಧ್ಯಕ್ಷರ ಸ್ಥಾನವನ್ನು ಬಿಟ್ಟುಕೊಡಿ ಎಂದು ಕೇಳುವಂತಹ ಪರಿಸ್ಥಿತಿಗೆ ನಾವು ಹೋಗಿಲ್ಲ. ಲೋಕಸಭೆಯಲ್ಲಿ ಲಕ್ಷದ್ವೀಪದಿಂದ ಲೋಕಸಭೆಗೆ 10 ಬಾರಿ ಆಯ್ಕೆಯಾಗಿರುವ ಮಾನ್ಯ ಪಿ.ಎಂ. ಸಯೀದ್ ರವರನ್ನು ದೇಶದ ಕೊನೆಯಲ್ಲಿರತಕ್ಕ ಜನರು ರಾಷ್ಟ್ರದ ಮುಖ್ಯ ವಾಹಿನಿಗೆ ಬರುವ ದೃಷ್ಟಿಯಿಂದ, ಅವರು ಒಂದು ಜನಾಂಗದ ಮುಖಂಡರನ್ನು ಪ್ರತಿನಿಧಿಸತಕ್ಕವರಾದ್ದರಿಂದ ಮಾನ್ಯ ಪ್ರಧಾನ ಮಂತ್ರಿಗಳಿಗೆ, ಆಡಳಿತ ಪಕ್ಷಕ್ಕೆ ಇದು ಒಂದು ವ್ಯಕ್ತಿತ್ವ ಮತ್ತು ಲೋಕಸಭೆಗೆ ಹೊಸ ಮೆರಗು ಕೊಡುತ್ತದೆ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ಆದರಂತೆ ನಿಮ್ಮೆಲ್ಲರಿಂದಲೂ ಸಹಾ ನಾವು ಬಹಳ ನೀರಿಕ್ಷೆಯನ್ನು ಇಟ್ಟುಕೊಂಡಿದ್ದೆವು. ಇವತ್ತು ಆ ನಿರೀಕ್ಷೆ ಹುಸಿಯಾಗುವಂತಹ ಪರಿಸ್ಥಿತಿ ಬಂದಿದೆ. ಇವತ್ತು ನಾವೆಲ್ಲರೂ ಸೇರಿ ಮಾನ್ಯ ವಿಶ್ವೇಶ್ವರ ಹೆಗ್ಗಡೆಯವರನ್ನು ಎಲ್ಲಾ ವಿರೋಧ ಪಕ್ಷಗಳ ಅಭ್ಯರ್ಥಿಯನ್ನಾಗಿ ಮಾಡಿರುವುದು ಬಲ ಪ್ರದರ್ಶನಕ್ಕೆ ಅಲ್ಲ. ನೀವು ಗೆದ್ದಿದ್ದೀರಿ, ನಾವು ಸೋತಿದ್ದೇವೆ, ನಮಗಿಂತ ನಿಮ್ಮ ಬಲ ಹೆಚ್ಚಿದೆ ಎಂಬ ಅರಿವು ನಮಗಿದೆ. ಬಲಪ್ರದರ್ಶನಕ್ಕೆ ಅಲ್ಲ ಎನ್ನುವ ಅರಿವು ಸಹಿತ ನಮಗೆ ಗೊತ್ತಿದೆ. ಇಂತಹ ಸಂಪ್ರದಾಯಗಳನ್ನು ಪ್ರಾರಂಭ ಮಾಡುವುದಕ್ಕೆ ತಮಗೆ ಅಡಚಣೆ ಏನಿದೆ ಎಂದು ನಮಗೆ ಅರ್ಥವಾಗುತ್ತಿಲ್ಲ. ಈ ದೃಷ್ಟಿಯಿಂದ ನಾವು ಏನು ಎನ್ನುವುದು ನಿಮ್ಮ ಅರಿವು ಇಟ್ಟುಕೊಂಡು ನಾವು ಈ ಕೆಲಸ ಮಾಡಿದ್ದೇವೆ. ಕೃಷ್ಣರವರು ಒಳ್ಳೆಯ ಸಂಪ್ರದಾಯವನ್ನು ಹಾಕಿದ್ದಾರೆ. ಏಕೆಂದರೆ, ಇಲ್ಲಿ ನಾಲ್ಕು ಜನ ವಿಧಾನ ಸಭೆ ಅಧ್ಯಕ್ಷರಾಗಿ ಕೆಲಸ ಮಾಡಿದವರಿದ್ದೀರಿ. 1962ನೇ ಇಸವಿಯಿಂದ ಕೃಷ್ಣರವರು ಅಸೆಂಬ್ಲಿಯಲ್ಲಿದ್ದಾರೆ ವಿರೋಧ ಪಕ್ಷದ ನಾಯಕರಾಗಿ ಎಲ್ಲ ಸನ್ನಿವೇಶಗಳನ್ನು ಉಪಯೋಗಿಸಿಕೊಂಡು ಸಮರ್ಥವಾಗಿ ಕೆಲಸ ಮಾಡಿದ ಶ್ರೀ ಖರ್ಗೆಯವರು, ಶ್ರೀ ಹೆಚ್. ಕೆ. ಪಾಟೀಲರು ಇಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಇದು ಮಾಡಲಿಲ್ಲ ಎಂದರೆ, ಇನ್ನು ಯಾವಾಗ ಸತ್ ಸಂಪ್ರದಾಯವನ್ನು ಪ್ರಾರಂಭವಾಗುವುದು? ಎನ್ನುವ ದೃಷ್ಟಿಯಿಂದ ನಾವು ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ.

+ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೇ, ಇವತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಆಯ್ಕೆಯ ಸಂದರ್ಭ ಒದಗಿ ಬಂದಿದೆ. ನಾನು ಎರಡನೇ ಬಾರಿ ಈ ಸದನ ಪ್ರವೇಶ ಮಾಡಿರುವುದು. ನಾನು ಕಳೆದ ಅಧಿವೇಶನದ ಸಂದರ್ಭದಲ್ಲಿ ನಮ್ಮ ಅಧಿವೇಶದ ಕಾರ್ಯಕಲಾಪಗಳು ಹೇಗೆ ನಡೆದಿವೆ ಎನ್ನುವುದನ್ನು ಇಲ್ಲಿ ಪ್ರತ್ಯಕ್ಷವಾಗಿ ಒಬ್ಬ ಸದಸ್ಯನಾಗಿ ನೋಡಿದ್ದೇನೆ. ನಾನು ಸದನಕ್ಕೆ ಪ್ರವೇಶ ಮಾಡುವಂತಹ ಸಂದರ್ಭದಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ನಮ್ಮ ಈ ಸದನದ ಪಾವಿತ್ರ್ಯತೆ ಬಗ್ಗೆ, ಘನತೆ ಬಗ್ಗೆ, ಗೌರವದ ಬಗ್ಗೆ ರಾಜ್ಯದ ಜನ ಯಾವ ಒಂದು ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೊ, ಯಾವ ಹಂಬಲವನ್ನು ವ್ಯಕ್ತಪಡಿಸುತ್ತಾರೊ ಎನ್ನುವುದರ ಬಗ್ಗೆ ಸಂಪೂರ್ಣವಾದ ಅರಿವು ಆಗಿರುವುದು ಕಳೆದ ಐದು ವರ್ಷಗಳಲ್ಲಿ ನಡೆದಿರುವುದನ್ನು ನಾವು ನೋಡಿದಾಗ ಈ ಸಂಸದೀಯ ವ್ಯವಹಾರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಸದನಕ್ಕೆ ಇರುವ ಗೌರವವನ್ನು ನಾವು ಕಾಪಾಡಿಕೊಂಡು, ರಕ್ಷಿಸಿಕೊಂಡು ಹೋಗಬೇಕಾದ ಮಹತ್ವದ ಸಂದರ್ಭ ಪ್ರತಿಕ್ಷಣದಲ್ಲಿ ನಮ್ಮ ಮೇಲೆ ಇದೆ. ಈ ಸದನ ಯಾವುದೇ ಒಂದು ಪಕ್ಷದ ವೇದಿಕೆ ಅಲ್ಲ. ಅದು ಆಗಲೂ ಬಾರದು. ಹಾಗಾಗಿ ಪಕ್ಷಾತೀತವಾಗಿ ಸದನದ ಎಲ್ಲ 225 ಜನ ಸದಸ್ಯರು

ನಾವು ರಾಜ್ಯದ ಜನತೆಯ ಹಿತಕ್ಕೋಸ್ಕರ ಅವರ ಆಗುಹೋಗುಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿ ಅವರ ಭಾವನೆಗಳಿಗೆ ಸ್ಪಂದಿಸಿ ಅವರ ಕಷ್ಟ ನಿವಾರಣೆ ಮಾಡುವಂತಹ ಒಂದು ಜವಾಬ್ದಾರಿಯುತ ವೇದಿಕೆ ಈ ಸದನ ಆಗಬೇಕು. ಹಿರಿಯರಾದ ಅನೇಕ ಜನ ಸದಸ್ಯರು ಕಳೆದ ಅಧಿವೇಶನದಲ್ಲಿ ಈ ಎಲ್ಲ ಸಂಗತಿಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನ ಅಂತೂ ಒಂದು ಪ್ರಾಥಮಿಕ ಸದಸ್ಯ ಸಹ ಆ ಪಕ್ಷದವರು ಆಗಬಾರದು ಎಂದು ನಾನು ಕೇಳಿದ್ದೇನೆ. ತಾವು ಅಧ್ಯಕ್ಷರಾದ ನಂತರ ತಾವು ಯಾವ ಪಕ್ಷದ ಸದಸ್ಯರಾಗಿದ್ದು, ಪ್ರಧಾನ ಕಾರ್ಯದರ್ಶಿ ಉಪಾಧ್ಯಕ್ಷರಾಗಿದ್ದಿರಿ ಅದಕ್ಕೂ ಸಹ ರಾಜೀನಾಮೆ ನೀಡಿರುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಈ ಸದನದಲ್ಲಿ ಅತ್ಯಂತ ಪವಿತ್ರವಾದುದು. ಅತ್ಯಂತ ಮಹತ್ವವಾದುದು ಮತ್ತು ಅತ್ಯಂತ ಜವಾಬ್ದಾರಿಯುತವಾದುದು. ಈಗ ಉಪಾಧ್ಯಕ್ಷರ ಆಯ್ಕೆ ಸಂದರ್ಭ ಬಂದಿದೆ. ನಾವು ಈ ಸದನದ ಸತ್ ಸಂಪ್ರದಾಯವನ್ನು ನಾವು ರಕ್ಷಣೆ ಮಾಡಬೇಕು. ಈ ಸದನಕ್ಕೆ ಇನ್ನು ಹೆಚ್ಚು ಗೌರವ ಬರುವ ರೀತಿಯಲ್ಲಿ ನಾವು ನಮ್ಮ ಉಪಾಧ್ಯಕ್ಷರ ಆಯ್ಕೆಯನ್ನು ಮಾಡಬೇಕಾಗಿದೆ. ನಮ್ಮ ಬಗ್ಗೆ ರಾಜ್ಯದ ಕೋಟ್ಯಾಂತರ ಜನ ಏನು ಆಸೆ ಅಪೇಕ್ಷೆ ಅವರು ಇಟ್ಟುಕೊಂಡಿದ್ದಾರೆ, ಅದನ್ನು ಜವಾಬ್ದಾರಿಯುತವಾಗಿ ನೇರವೇರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ನಮಗೆ ಕೇಂದ್ರ ಸರ್ಕಾರ ಒಂದು ಮಾದರಿ ಹಾಕಿ ಕೊಟ್ಟಿದೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಸಭಾನಾಯಕರು ಮೊನ್ನೆ ಎಲ್ಲ ಸದಸ್ಯರನ್ನು ಪರಿಚಯಿಸುವಾಗ ಕೇಂದ್ರದಲ್ಲಿ ವಾಜಪೇಯಿಯವರು ನಿಮ್ಮ ಪ್ರಧಾನಿಯವರು ಹೇಗೆ ಪರಿಚಯಿಸಿದ್ದಾರೆ, ಹಾಗೆ ನಾನು ಪರಿಚಯಿಸುತ್ತಿದ್ದೇನೆ ಎನದು ಹೇಳಿದರು. ಬಹಳ ಸಂತೋಷವಾಯಿತು. ನಿಮ್ಮ ಅಟಲ್ ಬಿಹಾರಿ ವಾಜಪೇಯಿ ಅವರ ಸತ್ ಸಂಪ್ರದಾಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಪಾಲಿಸುತ್ತಿದ್ದಾರೆಂದು ಸಂತೋಷವಾಯಿತು. ಹಿಂದಿನ ಅಧಿವೇಶನದಲ್ಲಿ ಹೀಗೆ ನಡೆದಿರಲಿಲ್ಲ, ಮೊದಲ ಸಲ ನಾನು ಆಯ್ಕೆಯಾಗಿ ಬಂದಾಗ 1994ರಲ್ಲಿ ಆಡಳಿತ ಪಕ್ಷ ತನ್ನ ಮಂತ್ರಿಗಳನ್ನು ಪರಿಚಯ ಮಾಡಲಿಲ್ಲ ಎಂದು ವಿರೋಧಪಕ್ಷದಲ್ಲಿದ್ದ ನಾವು ಮತ್ತು ಸನ್ಮಾನ್ಯ ಖರ್ಗೆಯವರು ಎಲ್ಲರೂ ಆರೋಪ ಮಾಡಿದ್ದೆವು. ಆ ನಂತರವೂ ಪರಿಚಯ ಮಾಡಿಕೊಳ್ಳಲಿಲ್ಲ. ಸತ್ ಸಂಪ್ರದಾಯವನ್ನು ತಾವು ಮಾಡಿ ಕೊಟ್ಟಿದ್ದೇನೆ ಎಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಮಾನ್ಯ ಸಭಾ ನಾಯಕರಿಗೆ ವಾಜಪೇಯಿಯವರು ಆದರ್ಶವಾದರೆ ಉಪ ನಾಯಕರ ಬಗ್ಗೆ ಏಕೆ ಆದರ್ಶ ಆಗಬಾರದು ಎಂದು ಪ್ರಶ್ನೆ ಕೇವಲ ನನಗೆ ಮಾತ್ರ ಅಲ್ಲ ಪತ್ರಿಕೆಯಲ್ಲಿ ಕೂಡ ಆ ಸಂದರ್ಭದಲ್ಲಿ ಅಭಿಪ್ರಾಯ ವ್ಯಕ್ತವಾಗಿತ್ತು. ಎಲ್ಲರಿಗೂ ಅನ್ನಿಸುವುದಕ್ಕೂ ಸಾಧ್ಯ ಇದೆ.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಗಳು): ನಾನು ವಾಜಪೇಯಿಯವರು ಆದರ್ಶ ಎಂದು ಹೇಳಲಿಲ್ಲ. ನನ್ನ ಬಾಯಿಯಲ್ಲಿ ಮಾತುಗಳನ್ನು ಹೋಲಿಸಬೇಡಿ. ನಾನು ಹೇಳಿದ್ದು ವಾಜಜಪೇಯಿಯವರು ಲೋಕಸಭೆಯಲ್ಲಿ ಹೇಗೆ ಪರಿಚಯ ಮಾಡಿದರು ಅದೇ ರೀತಿಯಲ್ಲಿ ಮಾಡಿದ್ದೇನೆ ಎಂದು ಹೇಳಿದೆ. ಏಕೆಂದರೆ ನಿಮ್ಮ ಬೆಂಚಿನಲ್ಲಿ ಕೂತಿರತಕ್ಕಂತಹ ಕೆಲವು ಮಾನ್ಯ ಸದಸ್ಯರು ರೆಸ್ಪೆಲೆಸ್ ಆಗಿದ್ದರು. ಅದರಲ್ಲಿ ತಾವೂ ಕೂಡ ಒಬ್ಬರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಒಟ್ಟು ವಾಜಪೇಯಿಯವರು ಪರಿಚಯ ಮಾಡಿದ ರೀತಿಯಲ್ಲಿ ಪರಿಚಯ ಮಾಡಿದ್ದಾರೆ ಎನ್ನು ಮಾತು ಇದೆ ನಾನು ಅದನ್ನು ವಿವರವಾಗಿ ಹೇಳುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಆ ಪದ್ಧತಿ ಹೊಸದೇನೂ ಅಲ್ಲ, ಎಲ್ಲ ಸಂದರ್ಭದಲ್ಲಿ ಮಾಡಿರುವುದು. ವಾಜಪೇಯಿಯವರು ಹೊಸದಾಗಿ ಏನೂ ಮಾಡಲಿಲ್ಲ;

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನನ್ನ ಪ್ರಶ್ನೆ ಏನೆಂದರೆ, ನಮ್ಮ ವಿರೋಧ ಪಕ್ಷದ ಎಲ್ಲ ಸದಸ್ಯರ ಅಪೇಕ್ಷೆ ಏನು ಇದೆ ಎಂದರೆ, ಮಾನ್ಯ ನಾಯಕರಾದ.....

ಶ್ರೀ ಕೆ. ಹೆಚ್. ರಂಗನಾಥ್ : ಅವರು ಮದುವೆ ಆಗಲಿಲ್ಲ, ನಾವೂ ಹಾಗೆಯೇ ಇರುವುದಕ್ಕಾಗುತ್ತಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಹೇಳುವುದಕ್ಕೆ ಬಯಸುವುದು ಇಷ್ಟೆ. ನಮ್ಮ ನಾಯಕರಾದ ಶ್ರೀಯುತ ಜಗದೀಶ್ ಶೆಟ್ಟರ್‌ರವರು, ಪಿ. ಜಿ. ಆರ್. ಸಿಂಧ್ಯರವರು ಅವರು ತಮ್ಮ ಭಾವನೆ ವ್ಯಕ್ತಪಡಿಸಿದ್ದರೂ ಕೂಡ ನಮಗೆ ಚುನಾವಣೆ ಆಗಬೇಕೆಂದು ಇಲ್ಲ. ನಮ್ಮ ನಾಯಕರಾದ ಸನ್ಮಾನ್ಯ ಯಡಿಯೂರಪ್ಪನವರು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಸ್ವತ: ದೂರವಾಣಿಯಲ್ಲಿ ಮಾತನಾಡಿದರು. ಉಳಿದ ನಮ್ಮ ಪ್ರಮುಖರು ಮಾತನಾಡಿದಾಗ ಸೌಜನ್ಯಕ್ಕೂ ಸಹ ಅವರನ್ನು ಸಂಪರ್ಕಿಸುವಂತಹ ಪ್ರಯತ್ನ ಮಾಡಲಿಲ್ಲ. ನಿಮ್ಮ ಕಷ್ಟಗಳು ಏನು ಎಂದು ನಮಗೆ ಗೊತ್ತಿದೆ. ಏಕೆಂದರೆ ನಾನು ಮತ್ತೆ ಅದನ್ನೇ ಪ್ರಸ್ತಾವ ಮಾಡುವುದಕ್ಕೆ ಹೋಗುವುದಿಲ್ಲ. ನಿಮ್ಮ ಕರ್ತವ್ಯಗಳ ಅರಿವು ನಮಗೆ ಆಗಿದೆ. ಇದು ಒಂದು ಪಕ್ಷದ ಚುನಾವಣೆ ವೇದಿಕೆ ಎಂದು ಆಗಬಾರದು, ಇದು ಒಂದು ಸದನದ ಗೌರವವನ್ನು ಕಾಪಾಡುವಂತಹ, ಘನತೆಯನ್ನು ಕಾಪಾಡುವಂತಹ ಈ ಸದನವನ್ನು ಜವಾಬ್ದಾರಿಯುತವಾಗಿ ನಡೆಸಿಕೊಂಡು ಹೋಗುವಂತಹ ಉಪಾಧ್ಯಕ್ಷರ ಆಯ್ಕೆಯನ್ನು ಪರಸ್ಪರ ವಿಶ್ವಾಸದಿಂದ, ಪರಸ್ಪರ ವೈಚಾರಿಕ ಹೊಂದಾಣಿಕೆಯಿಂದ ಈ ಸದನವನ್ನು ನಡೆಸಿಕೊಂಡು ಹೋಗುವ ಒಂದು ಜವಾಬ್ದಾರಿಯುತವಾದ ಸ್ಥಾನ ಆಗಬೇಕು. ನನಗೆ ಮನೋಹರ ತಹಶೀಲ್ದಾರ್‌ರವರು ಬಹಳ ಹತ್ತಿರದವರು. ನನಗೂ ಅವರಿಗೂ ವೈಯುಕ್ತಿಕವಾದ ಪರಿಚಯವಿಲ್ಲ. ಸಿರ್ಸಿಯ ಹತ್ತಿರದ ಹಾನಗಲ್‌ನವರು. ವೈಯಕ್ತಿಕವಾಗಿ ಅವರ ಬಗ್ಗೆ ಯಾವುದೇ ವಿರೋಧ ಇಲ್ಲ. ನಾವು ಅವರನ್ನು ಗೌರವಯುತವಾಗಿ ಸತ್ ಸಂಪ್ರದಾಯದಂತೆ ಸದನದ ಗೌರವ ಘನತೆ ಕಾಪಾಡುವ ಹಿನ್ನೆಲೆಯಲ್ಲಿ ನಾವು ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡೋಣ. ಚುನಾವಣೆಗಳು ಬೇಡ. ಡಿವಿಷನ್‌ಗೋಸ್ಕರ ಪ್ರೆಸ್ ಮಾಡುವುದೂ ಬೇಡ. ಗೌರವಯುತವಾಗಿ ಸರ್ವಾನುಮತದಿಂದ ನಮ್ಮ ಉಪಾಧ್ಯಕ್ಷರ ಆಯ್ಕೆ ಮಾಡೋಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

3. ಉಪಾಧ್ಯಕ್ಷರ ಚುನಾವಣೆ

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಶ್ರೀ ಮನೋಹರ ಹೆಚ್. ತಹಶೀಲ್ದಾರ್‌ರವರನ್ನು 11ನೇ ವಿಧಾನ ಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ ಸಚಿವರು): ಮಾನ್ಯ ಅಧ್ಯಕ್ಷರೆ ಶ್ರೀ ಎಸ್. ಎಂ. ಕೃಷ್ಣ ಮಾನ್ಯ ಮುಖ್ಯ ಮಂತ್ರಿಗಳು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೆನೆ.